



# Sree Siddaganga Education Society (R.)

**Sree Siddaganga Math, Tumkur-572014**

## RECRUITMENT NOTIFICATION FOR ASSISTANT PROFESSORS

Applications are invited from Eligible Candidates for the following Aided Assistant Professor Posts to be filled in Degree Colleges under Sree Siddaganga Education Society as per the Commissioner Collegiate and Technical Education, Govt. of Karnataka, Bangalore order No. ಕಾಶಿಇ/21/ಖಾಹುಭ/2020–21/ಬೆಂಗ್ರಾ/ನೇವಿ–2 Dated:27-03-2023. Joint Director, Regional Office, Collegiate Education, Bangalore Order No: ಕಾಶಿಇ/ಪ್ರಾಕಬೆಂ/ಆಂ–1/06/ಖಾಹುಭ/2019–20 Dated : 28.03.2023

| Sl. No | Subject | No. Of Posts | Reservation |
|---|---|---|---|
| 01 | Kannada | 01 | SC-01 |
| 02 | English | 01 | SC-01 |
| 03 | Chemistry | 06 | SC-01, General-01, ST-01, General (Women)-01, Cat (1)-01, General (Rural)-01 |
| 04 | Commerce | 04 | SC-01, General-01, ST-01, General (Women)-01 |
| 05 | History | 02 | SC-01, General-01 |
| 06 | Botany | 02 | SC-01, General-01 |
| 07 | Mathematics | 02 | SC-01, General-01 |
| 08 | Physics | 03 | SC-01, General-01, ST-01 |
| 09 | Zoology | 03 | SC-01, General-01, ST-01 |
| 10 | Political Science | 01 | SC-01 |
| 11 | Sociology | 02 | SC-01, General-01 |
| | Total | 27 | 27 |

**Instructions to Candidates:**

1. Duly filled in application with enclosures along with the Demand Draft of Rs. 2000/-(For SC/ST/CAT-1 Rs.1000/-) non refundable Processing fees favouring "President, Sree Siddaganga Education Society, S.S. Math, Tumkur-572104. Should reach through Registered/Speed Post to The Secretary, Sree Siddaganga Education Society, S.S. Math, Tumkur-572104 with in 21 days of the date of this advertisement. A Copy of the application and enclosures should be sent to Joint Director, Collegiate Education, Regional Office, Bangalore-01
2. AGE: For 1) General Merit (GM)-40 years, 2) OBC Categories (Cat-2A, 2B, 3A, 3B) - 43 Years, SC/ST/CAT (1) -45 Years as on the Last date of submission of Application. However in addition to above mentioned age limit, the applicants working as full time faculties in any Government or Private Aided Colleges can claim their number of years of service or 5 years whichever is less with the related documents duly signed by concerned Joint Director, Regional Office of Collegiate Education.
3. **Qualification**:
   a) Candidates must hold Master Degree in the Concerned subject with minimum 55% (50% for SC/ST) from a University established by law in India.
   b) Candidates should have qualified in the NET/SLET (KSET) exams.
   c) Candidates with Ph.D degree with course work are exempted from NET/SLET exams
   d) Candidates possessing Ph.D degree or registed for Ph.D degree prior to 11.07.2009 will be subject to fulfilling / the conditions laid down in the UGC notification 04.05.2016
4. Salary: As per UGC Norms & Government of Karnataka.
5. Inservice candidates shall submit their applications through the proper channel with 'No Objection Certificate'.
6. Late and incomplete applications will be rejected and no correspondence will be entertained.
7. Govt/Dept. Reserves the right to cancel/hold the permission and selection of the Recruitment of the said post at any stage. Mere submission of the application or attending the interview does not hold any right to the candidate on the said post.
8. The Interview date will be intimated. And Candidates attending the interview will not be given any kind of Allowance.
9. A copy of the applications with attested copies send to 'Joint Director, Regional office, No-05 Kalidasa Road, Gandhi Nagar,bangalore-560009

Application with complete details such as Full Name, Date of Birth, Place of Birth, Caste, Sub-Caste, Category & Reservation, Educational Qualifications with year of passing, Details of Board/University, Marks obtained, Percentage (from SSLC to the Highest Qualification), Experience with details, any other information required for the post as per UGC norms, Postal Address with Pin Code, Contact Details must be enclosed with all the relevant duly attested copies of all the certificates. For application forms, kindly visit www.sses.org.in

The Envelope containing the application should have the Title "Application for the post of Assistant Professor in ______________________

**Sd/-**
**T K NANJUNDAPPA**
**Secretary**
**SSES, S.S. Math,**

**Place : Sree Siddaganga Math**
**Date: 28.03.2023**





# ಶ್ರೀ ಸಿದ್ಧಗಂಗಾ ವಿದ್ಯಾ ಸಂಸ್ಥೆ (ರಿ.)

### ಶ್ರೀ ಸಿದ್ಧಗಂಗಾ ಮಠ, ತುಮಕೂರು-572014

## ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ನೇಮಕಾತಿ ಪ್ರಕಟಣೆ

ಸದರಿ ಸಂಸ್ಥೆಯಡಿಯಲ್ಲಿ ನಡೆಸುತ್ತಿರುವ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಖಾಲಿ ಇರುವ ಅನುದಾನಿತ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಮಾನ್ಯ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ:ಕಾಶಿಇ/21/ಖಾಹುಭ/2020-21/ಬೆಂಗ್ರಾ/ನೇವಿ-2 ದಿನಾಂಕ:27-03-2023 ಹಾಗೂ ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ:ಕಾಶಿಇ/ಪ್ರಾಕಬೆಂ/ಆಂ-1/06/ಖಾಹುಭ/2019-20 ದಿನಾಂಕ:28.03.2023 ರ ನಿರ್ದೇಶನದಂತೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ.ಸಂ | ವಿಷಯ | ಹುದ್ದೆಗಳ ಸಂಖ್ಯೆ | ಮೀಸಲಾತಿ |
|---|---|---|---|
| 01 | ಕನ್ನಡ | 01 | ಪ.ಜಾ-1 |
| 02 | ಆಂಗ್ಲಭಾಷೆ | 01 | ಪ.ಜಾ-1 |
| 03 | ರಸಾಯನಶಾಸ್ತ್ರ | 06 | ಪ.ಜಾ-1, ಸಾಮಾನ್ಯ-1, ಪ.ಪಂ-1, ಸಾ (ಮ)-1, ಪ್ರವರ್ಗ(1)-1, ಸಾ.ಅ (ಗ್ರಾ)-1 |
| 04 | ವಾಣಿಜ್ಯಶಾಸ್ತ್ರ | 04 | ಪ.ಜಾ-1, ಸಾಮಾನ್ಯ-1, ಪ.ಪಂ-1, ಸಾ.ಅ(ಮ)-1 |
| 05 | ಇತಿಹಾಸ | 02 | ಪ.ಜಾ-1, ಸಾಮಾನ್ಯ-1 |
| 06 | ಸಸ್ಯಶಾಸ್ತ್ರ | 02 | ಪ.ಜಾ-1, ಸಾಮಾನ್ಯ-1 |
| 07 | ಗಣಿತಶಾಸ್ತ್ರ | 02 | ಪ.ಜಾ-1, ಸಾಮಾನ್ಯ-1 |
| 08 | ಭೌತಶಾಸ್ತ್ರ | 03 | ಪ.ಜಾ-1, ಸಾಮಾನ್ಯ-1, ಪ.ಪಂ-1 |
| 09 | ಪ್ರಾಣಿಶಾಸ್ತ್ರ | 03 | ಪ.ಜಾ-1, ಸಾಮಾನ್ಯ-1, ಪ.ಪಂ-1 |
| 10 | ರಾಜ್ಯಶಾಸ್ತ್ರ | 01 | ಪ.ಜಾ-1 |
| 11 | ಸಮಾಜಶಾಸ್ತ್ರ | 02 | ಪ.ಜಾ-1, ಸಾಮಾನ್ಯ-1 |
| | ಒಟ್ಟು | 27 | 27 |

1) ಅರ್ಜಿಯನ್ನು ತಮ್ಮ ಪೂರ್ಣ ಸ್ವವಿವರ ಮತ್ತು ವಿದ್ಯಾರ್ಹತೆಗೆ ಸಂಬಂಧಿಸಿದಂತೆ ದೃಢೀಕೃತ ಪ್ರತಿಗಳು ಹಾಗೂ ಮೀಸಲಾತಿಯ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪಡೆದುಕೊಂಡಿರುವ ಪ್ರಮಾಣಪತ್ರದ ದೃಢೀಕೃತ ಪ್ರತಿಗಳೊಂದಿಗೆ ರೂ. 2000-00 (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ-1 ಅಭ್ಯರ್ಥಿಗಳಿಗೆ ರೂ.1000-00) ಬ್ಯಾಂಕ್ ಹುಂಡಿಯನ್ನು "President, SSES, Sree Siddaganga Math (ಅರ್ಜಿ ಶುಲ್ಕವನ್ನು ಮರುಪಾವತಿಸಲಾಗುವುದಿಲ್ಲ). ಇವರಿಗೆ ಸಂದಾಯವಾಗುವಂತೆ ಪಡೆದು ಎಲ್ಲಾ ದಾಖಲೆಗಳ ಸಮೇತ ಕಾರ್ಯದರ್ಶಿಗಳು, ಶ್ರೀ ಸಿದ್ಧಗಂಗಾ ವಿದ್ಯಾ ಸಂಸ್ಥೆ, ಶ್ರೀ ಸಿದ್ಧಗಂಗಾ ಮಠ ತುಮಕೂರು-572104 ಇಲ್ಲಿಗೆ ಪತ್ರಿಕೆಯಲ್ಲಿ ಪ್ರಕಟಗೊಂಡ ದಿನಾಂಕದಿಂದ 21 ದಿನಗಳೊಳಗಾಗಿ ರಿಜಿಸ್ಟರ್ ಅಥವಾ ಸ್ಪೀಡ್ ಪೋಸ್ಟ್ ಮೂಲಕ ತಲುಪಿಸುವುದು. ಲಕೋಟೆಯ ಮೇಲೆ ಯಾವ ಹುದ್ದೆಗೆ ಅರ್ಜಿ ಸಲ್ಲಿಸಲಾಗಿದೆ ಎಂದು ಸ್ಪಷ್ಟವಾಗಿ ನಮೂದಿಸುವುದು.

2) **ವಯೋಮಿತಿ:** ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1 ಇವರಿಗೆ ಗರಿಷ್ಠ 45 ವರ್ಷ, ಇತರೆ ಹಿಂದುಳಿದ ವರ್ಗ ಗರಿಷ್ಠ 43 ವರ್ಷ ಮತ್ತು ಸಾಮಾನ್ಯ ವರ್ಗ ಗರಿಷ್ಠ 40 ವರ್ಷಗಳನ್ನು (ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕದಂತೆ) ಮೀರಿರಬಾರದು. ದಿನಾಂಕ: 13.12.2018 ರ ಸಂಖ್ಯೆ:ಇಡಿ/87/ಯುಪಿಸಿ/2016ರ ಸರ್ಕಾರದ ಸೇರ್ಪಡೆ ಆದೇಶದನ್ವಯ ಖಾಸಗಿ ಅನುದಾನಿತ/ಸರ್ಕಾರಿ ಪದವಿ ಕಾಲೇಜುಗಳಲ್ಲಿ ಪೂರ್ಣಕಾಲಿಕ ಬೋಧನಾನುಭವ ಹೊಂದಿರುವ ಅಭ್ಯರ್ಥಿಗಳಿಗೆ ಮೇಲಿನಂತೆ ವಯೋಮಿತಿಯನ್ನು ನಿಗದಿಪಡಿಸುವುದರೊಂದಿಗೆ ಅವರು ಬೋಧನಾನುಭವ ಹೊಂದಿರುವ ಸೇವಾವಧಿ ಅಥವಾ 5 ವರ್ಷಗಳು ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಅವಧಿಗೆ ಅಭ್ಯರ್ಥಿಗಳ ಬೋಧನಾನುಭವದ ದಾಖಲೆಗಳನ್ನು ಪ್ರಾದೇಶಿಕ ಜಂಟಿ ನಿರ್ದೇಶಕರಿಂದ ದೃಢೀಕರಿಸಿಕೊಂಡು ಸಲ್ಲಿಸಿದ್ದಲ್ಲಿ ಗರಿಷ್ಠ ವಯೋಮಿತಿಯಲ್ಲಿ ಮೀಸಲಾತಿಯನ್ನು ಪಡೆಯಬಹುದು.

3) **ವಿದ್ಯಾರ್ಹತೆ:** ಸಂಬಂಧಪಟ್ಟ ಸ್ನಾತಕೋತ್ತರ ವಿಷಯದಲ್ಲಿ ಕನಿಷ್ಠ 55% ಪಡೆದು ತೇರ್ಗಡೆಯಾಗಿರಬೇಕು (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಕನಿಷ್ಠ 50%) ಹಾಗೂ NET/SLET ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಕೋರ್ಸ್ ವರ್ಕ್ ಮೂಲಕ Ph.D ಪದವಿ ಪಡೆದ ಅಭ್ಯರ್ಥಿಗಳಿಗೆ NET/SLET ಪರೀಕ್ಷೆಯಿಂದ ವಿನಾಯಿತಿ ನೀಡಲಾಗುವುದು. ಒಂದು ವೇಳೆ ದಿನಾಂಕ:11.07.2009ರ ಪೂರ್ವದಲ್ಲಿ Ph.D ಗೆ ನೊಂದಣಿ ಮಾಡಿಸಿದ್ದಲ್ಲಿ ಅಂತಹ ಅಭ್ಯರ್ಥಿಗಳು ದಿನಾಂಕ: 04.05.2016ರ ಯುಜಿಸಿ ಅಧಿಸೂಚನೆಯಲ್ಲಿ ಹೊರಡಿಸಿರುವ ನಿಯಮಗಳನ್ನು ಪೂರೈಸುವ ಷರತ್ತುಗಳಿಗೆ ಒಳಪಟ್ಟಿರುತ್ತದೆ. ದಿನಾಂಕ:11.07.2009ರ ನಂತರ ಯಾವುದೇ ನೇಮಕಾತಿಗೆ ಎಂ.ಫಿಲ್ ವಿದ್ಯಾರ್ಹತೆ ಪರಿಗಣಿಸಲಾಗುವುದಿಲ್ಲ.

4) **ವೇತನ ಶ್ರೇಣಿ ಮತ್ತು ಇತರೆ ನಿಬಂಧನೆಗಳು:** ಯುಜಿಸಿ ನಿಯಮಾವಳಿ ಮತ್ತು ಸರ್ಕಾರದ ಆದೇಶಗಳನ್ವಯ ಇರುತ್ತದೆ.

5) ಈಗಾಗಲೇ ಸರ್ಕಾರಿ/ಅನುದಾನಿತ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಭ್ಯರ್ಥಿಗಳು ತಾವು ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಯಿಂದ ನಿರಾಕ್ಷೇಪಣಾ ಪತ್ರವನ್ನು ಒದಗಿಸಬೇಕು.

6) ಸರ್ಕಾರ ಮತ್ತು ಯು.ಜಿ.ಸಿ ನಿಯಮಾವಳಿಗಳ ಪ್ರಕಾರ ಆಯ್ಕೆ ಪ್ರಕ್ರಿಯೆಯನ್ನು ನಡೆಸಲಾಗುವುದು.

7) ಅಪೂರ್ಣವಾದ ಹಾಗೂ ಕಡೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

8) ಆಯ್ಕೆ ಪ್ರಕ್ರಿಯೆಯು ಯಾವುದೇ ಹಂತದಲ್ಲಾದರೂ ಸದರಿ ಹುದ್ದೆಯ ಅನುಮತಿ ಮತ್ತು ಆಯ್ಕೆಯನ್ನು ಇಲಾಖೆ, ಸರ್ಕಾರವು ರದ್ದುಪಡಿಸುವ ಅಧಿಕಾರವನ್ನು ಹೊಂದಿರುತ್ತದೆ. ಅರ್ಜಿ ಸಲ್ಲಿಸಿರುವ ಹಾಗೂ ಸಂದರ್ಶನಕ್ಕೆ ಹಾಜರಾದ ಮಾತ್ರಕ್ಕೆ ಸದರಿ ಹುದ್ದೆಯ ನೇಮಕಾತಿ ಹಕ್ಕೆಂದು ಪರಿಗಣಿಸುವಂತಿಲ್ಲ.

9) ಅರ್ಜಿದಾರರು ಅರ್ಜಿಯ ಒಂದು ನಕಲು ಪ್ರತಿಯನ್ನು ಲಗತ್ತುಗಳೊಂದಿಗೆ ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು-01 ಇವರಿಗೆ ಸಲ್ಲಿಸುವುದು.

10) ಸಂದರ್ಶನ ದಿನಾಂಕವನ್ನು ನಂತರ ತಿಳಿಸಲಾಗುವುದು ಹಾಗೂ ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳಿಗೆ ಯಾವುದೇ ತರಹದ TA/DA ಕೊಡಲಾಗುವುದಿಲ್ಲ.

11) ಅರ್ಜಿ ನಮೂನೆ www.sses.org.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ.

ಸಹಿ/-
ಟಿ ಕೆ ನಂಜುಂಡಪ್ಪ
ಕಾರ್ಯದರ್ಶಿಗಳು,
ಶ್ರೀ ಸಿದ್ಧಗಂಗಾ ವಿದ್ಯಾ ಸಂಸ್ಥೆ, ಶ್ರೀ ಸಿದ್ಧಗಂಗಾ ಮಠ

ಸ್ಥಳ : ಶ್ರೀ ಸಿದ್ಧಗಂಗಾ ಮಠ
ದಿನಾಂಕ: 28.03.2023